# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.10.2011**

## *ಜೆ.ಸಿ. ರಸ್ತೆಯಲ್ಲಿರುವ ಪಾಲಿಕೆಯ ದಸ್ತಾವೇಜು ವಿಭಾಗ ಕಛೇರಿ ಸ್ಥಳಾಂತರ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯದ ವ್ಯಾಪ್ತಿಯಲ್ಲಿ 222 ಸಂಖ್ಯೆ ರಾತ್ರಿ ನಿರಾಶ್ರಿತರಿದ್ದು, ರಾಜ್ಯ ಸರ್ಕಾರ ಹಾಗೂ ಆಯುಕ್ತರ ನಿರ್ದೇಶನದಂತೆ ಜೆ.ಸಿ. ರಸ್ತೆಯಲ್ಲಿರುವ ದಸ್ತಾವೇಜು ಕೊಠಡಿ ಇರುವ ಕಟ್ಟಡದಲ್ಲಿ ತಂಗುದಾಣ ನಿರ್ಮಿಸಲು ಅಪರ ಜಿಲ್ಲಾ ಚುನಾವಣಾಧಿಕಾರಿ (ಕೇಂದ್ರ) ಹಾಗೂ ಅಪರ ಆಯುಕ್ತರು (ಆಡಳಿತ) ರವರು ಆದೇಶಿಸಿರುವ ಹಿನ್ನೆಲೆಯಲ್ಲಿ ಜೆ.ಸಿ. ರಸ್ತೆಯಲ್ಲಿರುವ ಬಿ.ಬಿ.ಎಂ.ಪಿ.ಯ ದಸ್ತಾವೇಜು ವಿಭಾಗವನ್ನು ಡಾ॥ ಟಿ.ಸಿ.ಎಂ. ರಾಯನ್ ರಸ್ತೆಯಲ್ಲಿರುವ (ಗೂಡ್ಸ್ ಶೆಡ್ ರಸ್ತೆ) ಚುನಾವಣಾ ದಾಸ್ತಾನು ಮಳಿಗೆಗೆ ಸ್ಥಳಾಂತರಿಸಲಾಗಿದೆ. ಸಂಬಂಧಪಟ್ಟ ಸಾರ್ವಜನಿಕರು ಇನ್ನು ಮುಂದೆ ಸ್ಥಳಾಂತರಗೊಂಡಿರುವ ಕಛೇರಿಯನ್ನು ತಮ್ಮ ಕೆಲಸ ಕಾರ್ಯಗಳಿಗೆ ಸಂಪರ್ಕಿಸಲು ಕೋರಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**